† ಶ್ರೀ ಎಸ್. ಆರ್. ಕಂಠಿ.—ಪ್ರೈವೇಟ್ ಕಾಲೇಜಿನಲ್ಲಿ ಎರಡು ತರಹ ಇದೆ ಒಂದು ಪೋಸ್ಟ್ ಗ್ರಾಜ್ಯುಯೇಟ್ಸ್ ಕಾಲೇಜು ಇನ್ನೊಂದು ಅಂಡರ್ ಗ್ರಾಜ್ಯುಯೇಟ್ಸ್ ಕಾಲೇಜು ಎಂದು. ಪೋಸ್ಟ್ ಗ್ರಾಜ್ಯುಯೇಟ್ಸ್ ಕಾಲೇಜಿಗೆ ಎಕ್ಸ್ ಮೈಸೂರಿನಲ್ಲಿ ನೆಟ್ ಎಕ್ಸ್‌ಪೆಂಡಿಚರ್‌ನಲ್ಲಿ 50 ಪರ್ಸೆಂಟ್ ಕೊಡುತ್ತಾ ಇದ್ದೇವೆ. ಅಂಡರ್ ಗ್ರಾಜುಯೇಟ್ಸು ಕಾಲೇಜಿಗೆ In Ex-Mysore area, grant admissible is three-fourths of the authorised expenditure *minus* fee income.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಕೆಲವು ಪ್ರೈವೇಟ್ ಕಾಲೇಜುಗಳಲ್ಲಿ ಈ ಗ್ರಾಂಟನ್ನು ದುರುಪಯೋಗ ಮಾಡಿಕೊಳ್ಳುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಹಾಗೆ ಬಂದಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ಅಂಥಾದ್ದೇನೂ ಬಂದಿಲ್ಲ, ಅದನ್ನು ಗಮನಕ್ಕೆ ತಂದರೆ ನೋಡೋಣ.

———

Extent of wet and Dry Lands submerged in Pavagada Taluk on account of construction of Perur Dam.

*Q.—573. Sri R. KENCHAPPA (Pavagada).—

Will the Government be pleased to state :—

(*a*) the extent of wet and dry lands submerged in Pavagada taluk on account of the Perur dam constructed across North Pennar river in Dharmavaram taluk, Ananthapur District by the Andhra Government ;

(*b*) the amount of compensation fixed to each acre of wet and dry lands so submerged ;

(*c*) whether the Andhra Government have agreed to pay the compensation directly to ryots or to this Government ;

(*d*) the reasons for the delay in paying the said compensation ;

(*e*) the steps taken by them in this behalf ?

*A.—Sri S. NIJALINGAPPA (Chief Minister).—

(*a*) (i) 48 acres. (Original) (As subsequently
(ii) 143 acres. 4 Guntas Dry modified by Andhra
8 ,, 26 ,, Wet Pradesh).

151 acres 30 Guntas

(*b*) (As proposed by Deputy Commissioner, Tumkur).—
Dry lands Rs. 200 to 500 per acre,
Wet lands Rs. 1,000 to 2,000 per acre.

(*c*) Mysore Government have not agreed to submerge more than 48 acres originally agreed to, therefore question of Andhra Pradesh agreeing to the compensation is not taken up.

(*d*) Andhra Pradesh constructing the dam higher than what was agreed to by Mysore and Madras.

(*e*) The matter is being negotiated between the two State Governments.

ಶ್ರೀ ಆರ್. ಕೆಂಚಪ್ಪ.—(ಇ) ಪ್ರಶ್ನೆಗೆ ಉತ್ತರವಾಗಿ ಹೆಚ್ಚು ಜಮೀನು ಮುಳುಗಡೆಯಾಗುವು ದಕ್ಕೆ ನರ್ಕಾರದವರು ಒಪ್ಪಿಕೊಂಡಿಲ್ಲ ಎಂದು ಉತ್ತರ ಕೊಟ್ಟಿರುತ್ತೀರಿ, ಈ ಅಣೆಕಟ್ಟನ್ನು ಮಾಡು

ವಾಗ 103 ಎಕರೆಗಳಷ್ಟು ಜಮೀನು ಮುಳುಗಡೆಯಾಗುತ್ತದೆ ಎಂದು ಸರ್ಕಾರದವರು ಪ್ರತಿಭಟನೆಯನ್ನು ಸೂಚಿಸಲಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಸೂಚಿಸಿದ್ದೇವೆ, ಅಷ್ಟು ನೀರು ಮುಳುಗಡೆಯಾಗುವುದಕ್ಕೆ ಅನುಮತಿ ಕೊಡಲು ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದ್ದೇವೆ.

ಶ್ರೀ ಆರ್. ಕೆಂಚಪ್ಪ.—ಈ ವಿಷಯು ಸರ್ಕಾರದ ಮಟ್ಟದಲ್ಲಿ ಇನ್ನೂ ವ್ಯವಹರಿಸಲ್ಪಡುತ್ತಿದೆ ಎಂದು ಹೇಳಿದ್ದೀರಿ, ಈ ವ್ಯವಹಾರಗಳು ಯಾವ ಹಂತದಲ್ಲಿ ಇವೆ ಮತ್ತು ಪರಿಹಾರವನ್ನು ಯಾವಾಗ ಕೊಡಿಸುತ್ತೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಎಷ್ಟು ಮುಳುಗಡೆ ಮಾಡುವುದಕ್ಕೆ ಅವಕಾಶ ಕೊಡುತ್ತೇವೆ ಎನ್ನುವುದು ತೀರ್ಮಾನವಾದ ಮೇಲೆ ಪರಿಹಾರ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

Middle and upgraded schools in Sathanur Hobli, Kanakapura Taluk.

*Q.—447. Sri S. KARIYAPPA (Kanakapura).—

Will the Government be pleased to state :—

(*a*) the names of Middle and Upgraded Schools in Sathanur Hobli, Kanakapura Taluk ;

(*b*) the strength of pupils in the VII Standard of each of these schools :

(*c*) whether there is representation for a long time for opening a High School in the place ;

(*d*) the persons or associations that have been asking for a High School to this place ;

(*e*) the action Government have taken in the matter ?

A.—Sri S. R. KANTHI (Minister for Education).—

(*a*) 1. Middle School, Sathanur.
2. Middle School, Attihalli.
3. Middle School, Venkatarayanadoddi.
4. New Type Middle School, Alahalli.
5. Upper Grade Primary Boys' School, Chikkalahalli.

(*b*) 1. Middle School, Sathanur ... 112
2. Middle School, Attihalli ... 37
3. Middle School, Venkatarayanadoddi ... 26
4. New Type Middle School, Alahalli ... 38
5. There is no VII Standard.

(*c*) No.

(*d*) & (*e*) Does not arise in view of reply to clause (*c*) above.

ಶ್ರೀ ಎಸ್. ಕರಿಯಪ್ಪ.—(ಇ) ಪ್ರಶ್ನೆಗೆ ಉತ್ತರ ಕೊಡುತ್ತಾ ಸಾತನೂರಿಗೆ ಶಾಲೆ ಕೊಡಬೇಕೆಂದು ಯಾರೂ ಮನವಿ ಮಾಡಿಕೊಂಡಿಲ್ಲ ಮತ್ತು ಯಾವ ಸಮಿತಿಗಳು ಅಥವಾ ವ್ಯಕ್ತಿಗಳೂ ಮನವಿ ಮಾಡಿಕೊಂಡಿಲ್ಲ ಎಂದು ಹೇಳಿದ್ದೀರಿ. ಕನಕಪುರ ರೂರಲ್ ಎಜ್ಯುಕೇಷನ್ ಸೊಸೈಟಿ, ಕನಕಪುರ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್‌ನವರು ಕೇಳಿಕೊಂಡಿಲ್ಲವೇ ಮತ್ತು ನಾನೂ ಎರಡು ಮೂರು ಕಾಗದವನ್ನು ತಮಗೆ ಬರೆದಿಲ್ಲವೇ ?

†ಶ್ರೀ ಎಸ್. ಆರ್. ಕಂಠಿ.—ಈ ಪ್ರಶ್ನೆ ಮಿಡ್ಲ್ ಸ್ಕೂಲ್‌ನ್ನು ಅಪ್ ಗ್ರೇಡ್ ಮಾಡುವ ಸಲುವಾಗಿ ಇರುವುದರಿಂದ ಉತ್ತರದಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ. ರೂರಲ್ ಎಜ್ಯುಕೇಷನ್ ಸೊಸೈಟಿಯವರು ಗರ್ಲ್ಸ್ ಹೈಸ್ಕೂಲ್ ಕೇಳಿದ್ದಾರೆ, ಅದು ನಿಜ ಮತ್ತು ಅದರಂತೆ ತಾಲ್ಲೂಕು ಬೋರ್ಡಿನವರು ಸಾತನೂರಿನಲ್ಲಿ ಮಾಡುತ್ತೇವೆ ಎಂದು ಅವರೂ ಸಹ ಕೇಳಿದ್ದಾರೆ.